## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 26-08-2022

### ಮಾರ್ಕೇಟ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 57/2022 ಕಲಂ 32, 34 ಕೆ.ಇ. ಕಾಯ್ದೆ :-

ದಿನಾಂಕ 25-08-202 ರಂದು 1000 ಗಂಟೆಯ ಸುಮಾರಿಗೆ ಪಿಎಸ್ಐ ರವರು ಠಾಣೆಯಲ್ಲಿದ್ದಾಗ ನನಗೆ ಬಾತ್ಮಿ ಬಂದಿದೆನಂದರೆ, ಬೀದರ ನಗರದ ಅಶೋಕಾ ಹೋಟಲ ಹತ್ತಿರ ಒಬ್ಬ ವ್ಯಕ್ತಿ ಅನಧಿಕೃತವಾಗಿ ಸರಾಯಿ ಮಾರಾಟ ಮಾಡುತ್ತಿದ್ದಾನೆಂದು ಬಂದ ಬಾತ್ಮಿ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ದಾಳಿ ಮಾಡಿ ಅವನಿಗೆ ಅಲ್ಲೆ ಹಿಡಿದುಕೊಂಡು ಅವನ ಹೆಸರು ಮತ್ತು ವಿಳಾಸ ವಿಚಾರಿಸಲಾಗಿ, ಅವನು ತನ್ನ ಹೆಸರು ಅನೀಲ ರೆಡ್ಡಿ ತಂದೆ ರಾಜಪ್ಪಾ ರೆಡ್ಡಿ ವಯ 43 ವರ್ಷ ಜಾತಿ ರೆಡ್ಡಿ ಉ;ಕೂಲಿ ಕೆಲಸ ಸಾ;ಮಂಗಲಪೇಟ ಬೀದರ ಅಂತಾ ತಿಳಿಸಿರುತ್ತಾನೆ. ಅವನಿಗೆ ಕ್ಯಾರಿ ಬ್ಯಾಗನಲ್ಲಿ ಏನಿದೆ ಎಂದು ವಿಚಾರಿಸಲಾಗಿ, ಅವನು ಇದರಲ್ಲಿ ಸರಾಯಿ ಇದೆ ಎಂದು ತಿಳಿಸಿದಾಗ ಪಂಚರ ಸಮಕ್ಷಮ ಸದರಿ ಪ್ಲಾಸ್ಟಿಕ ಕ್ಯಾರಿ ಬ್ಯಾಗ ಪರಿಶೀಲಿಸಿ ನೋಡಲಾಗಿ, ಇದರಲ್ಲಿ ಓರಿಜಿನಲ್ ಚೊಯಿಸ್ ವಿಸ್ಕಿ ಟೆಟ್ರಾ ಪ್ಯಾಕ 90 ಎಂ.ಎಲ್ ಒಟ್ಟು 38 ಇದ್ದು ಒಂದರ ಅ.ಕಿ.35/-ರೂ ಇದ್ದು ಒಟ್ಟು ಅ.ಕಿ.1330/-ರೂ ನೇದ್ದನ್ನು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

### ಮನ್ನಳ್ಳಿ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 42/2022 ಕಲಂ 87 ಕೆಪಿ ಕಾಯ್ದೆ :-

ದಿನಾಂಕ 25/08/2022 ರಂದು 17.30 ಗಂಟೆಗೆ ಪಿಎಸ್ಐ ರವರು ಠಾಣೆಯಲ್ಲಿದ್ದಾಗ ತಡಪಳ್ಳಿ ಗ್ರಾಮದ ಅಂಬೆಡ್ಕರ ಸಮುದಾಯ ಭವನ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಕೆಲವು ಜನರು ಹಣ ಹಚ್ಚಿ ಅಂದರ ಬಾಹರ ಎಂಬ ಇಸ್ಪೇಟ ಜೂಜಾಟ ಆಡುತ್ತಿದ್ದಾರೆ ಅಂತ ಖಚಿತ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ದಾಳಿ ಮಾಡಿ ಇಸ್ಪೇಟ ಜೂಜಾಟ ಆಡುವ 05 ಜನರಿಗೆ ಹಿಡಿದುಕೊಂಡು ಅವರಿಗೆ ಒಬ್ಬೊಬ್ಬರಿಗೆ ಅವರ ಹೆಸರು ವಿಚಾರಿಸಿ ಅವರ ಅಂಗ ಪರಿಶಿಲಿಸಿದಾಗ 1) ಓಂಕಾರ ತಂದೆ ಶಂಕರ ಅಮಲಾಪೂರ ವಯಃ 25 ವರ್ಷ ಜಾಃ ಎಸ್.ಸಿ ಹೊಲಿಯಾ ಉಃ ಕೂಲಿ ಕೆಲಸ ಸಾಃ ತಡಪಳ್ಳಿ ತಾಃ ಜಿಃ ಬೀದರ ಅಂತ ತಿಳಿಸಿದ್ದು ಇತನ ಹತ್ತಿರ 200/- ರೂ ಸಿಕ್ಕಿರುತ್ತವೆ. 2) ಶ್ರೀನಿವಾಸ ತಂದೆ ಮಾಣಿಕ ಬಲ್ಲಿಪೂರ ವಯಃ 25 ವರ್ಷ ಜಾಃ ಎಸ್.ಸಿ ಹೊಲಿಯಾ, ಉಃ ಕೂಲಿ ಕೆಲಸ ಸಾಃ ತಡಪಳ್ಳಿ ತಾಃ ಜಿಃ ಬೀದರ ಅಂತ ತಿಳಿಸಿದ್ದು ಇತನ ಹತ್ತಿರ 150/- ರೂ ಸಿಕ್ಕಿರುತ್ತವೆ.3) ಜಾವೀದ ತಂದೆ ಬಾಬರಪಾಷಾ ಶೇಕ ವಯಃ 24 ವರ್ಷ ಜಾಃ ಮುಸ್ಲಿಂ ಉಃ ಕೂಲಿ ಕೆಲಸ ಸಾಃ ತಡಪಳ್ಳಿ ತಾಃ ಜಿಃ ಬೀದರ ಅಂತ ತಿಳಿಸಿದ್ದು ಇತನ ಹತ್ತಿರ 250/- ರೂ ಸಿಕ್ಕಿರುತ್ತವೆ. 4) ಜೈಭೀಮ ತಂದೆ ರಾಮಲು ಗುಂಜಟಿ ವಯಃ 24 ವರ್ಷ ಜಾಃ ಎಸ್.ಸಿ ಉಃ ಕೂಲಿ ಕೆಲಸ ಸಾಃ ತಡಪಳ್ಳಿ ತಾಃ ಜಿಃ ಬೀದರ ಅಂತ ತಿಳಿಸಿದ್ದು ಇತನ ಹತ್ತಿರ 150/- ರೂ ಸಿಕ್ಕಿರುತ್ತವೆ. 5) ಘಾಳೆಪ್ಪಾ ತಂದೆ ನಾಗಪ್ಪಾ ಭಂಗೂರೆ ವಯಃ 50 ವರ್ಷ ಜಾಃ ಎಸ್.ಸಿ ಹೊಲಿಯಾ ಉಃ ಕೂಲಿ ಕೆಲಸ ಸಾಃ ತಡಪಳ್ಳಿ ತಾಃ ಜಿಃ ಬೀದರ ಅಂತ ತಿಳಿಸಿದ್ದು ಇತನ ಹತ್ತಿರ 200/- ರೂ ಸಿಕ್ಕಿರುತ್ತವೆ. ಹಾಗು ಇವರೆಲ್ಲರ ಮದ್ಯದಲ್ಲಿ ಜೂಜಾಟಕ್ಕೆ ಹಾಕಿದ ಹಣ 1100/- ರೂ ಮತ್ತು 52 ಇಸ್ಪೇಟ ಎಲೆಗಳು ಸಿಕ್ಕಿರುತ್ತವೆ. ಹೀಗೆ ಎಲ್ಲಾ ಸೇರಿ ಒಟ್ಟು ಹಣ 2050/- ರೂ ಮತ್ತು 52 ಇಸ್ಪೇಟ ಎಲೆಗಳು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

### ಗಾಂಧಿಗಂಜ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 130/2022 ಕಲಂ 32, 34 ಕೆ.ಇ. ಕಾಯ್ದೆ :-

ದಿನಾಂಕ: 25-08-2022 ರಂದು ರಾತ್ರಿ 08:00 ಗಂಟೆಗೆ ಪಿಎಸ್ಐ ರವರು ಠಾಣೆಂiiಲ್ಲಿದ್ದಾಗ ಅಮಲಾಪೂರ ಗ್ರಾಮದ ಗಣೇಶ ಮಂದಿರದ ಸಮೀಪ ಕಿರಾಣಿ ಅಂಗಡಿ ಮುಂದುಗಡೆ ರೋಡಿನ ಮೇಲೆ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಅನಧಿಕೃತವಾಗಿ ಸರಾಯಿ ಮಾರಾಟ ಮಾಡುತ್ತಿದ್ದ ಬಗ್ಗೆ ಇಂದು ಮಾಹಿತಿ ಬಂದಿದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ದಾಳಿ ಮಾಡಿ ಶ್ರೀನಿವಾಸ ರೆಡ್ಡಿ ತಂದೆ ಸುಭಾಷರೆಡ್ಡಿ ವಯ: 28 ವರ್ಷ ಈತನಿಂದ 90 ಎಮ್.ಎಲ್.ನ ಓರಿಜಿನಲ್ ಚಾಯ್ಸ ಸರಾಯಿಯ 105 ಟೆಟ್ರಾ ಪ್ಯಾಕೇಟ್‌ಗಳು ಒಂದರ ಕಿಮ್ಮತ್ತು 35.13/-ರೂ. ಹೀಗೆ ಎಲ್ಲವುಗಳ ಒಟ್ಟು ಕೀ. 3,688.65/-ರೂ. ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

ಮನ್ನಾಎಖೇಳ್ಳಿ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 90/2022 ಕಲಂ 379 ಐಪಿಸಿ :-

ದಿನಾಂಕ:25/08/2022 ರಂದು 19:00 ಗಂಟೆಗೆ ಫಿರ್ಯಾದಿ ಮಾಣಿಕರಾವ ತಂದೆ ಶಾಂತಪ್ಪಾ ಹಳ್ಳಿಖೇಡ ವಯ 71 ವರ್ಷ ಜಾತಿ: ಲಿಂಗಾಯತ ಉದ್ಯೋಗ:ಏರಟೇಲ್ ಟವರ್ ಪೇಟ್ರೊಲಿಂಗ್ ಸುಪರವೇಜರ್ ಕೆಲಸ ಸಾ||ರಾಮಚಂದ್ರ ನಗರ ನೌಬಾದ ತಾ|| ಜಿ|| ಬೀದರ ರವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೆನೆಂದರೆ ಶಾ ಕಂಪನಿಯಲ್ಲಿ ಪೇಟ್ರೂಲಿಂಗ್ ಸುಪರವೈಜರ ಎಂದು ಸುಮಾರು 7 ವರ್ಷದಿಂದ ಬೀದರ ಜಿಲ್ಲೆಯಲ್ಲಿರುವ ಸುಮಾರು 270 ಗೊಪುರಗಳ ಪೇಟ್ರೂಲಿಂಗ್ ನೊಡಿಕೊಂಡಿದ್ದು ಹೀಗಿರುವಾಗ ದಿನಾಂಕ: 24/08/2022 ರಂದು  ಗೊಪುರಕ್ಕೆ ಹೊಗಿ ನೋಡಿದಾಗ ಅದಕ್ಕೆ ಅಳವಡಿಸಿದಂತಾಹ ಎಕ್ಸೈಡ್ ಕಂಪನಿಯ 24 ಬ್ಯಾಟರಿಗಳು ಕಳುವಾಗಿರುತ್ತವೆ  ದಿನಾಂಕ:24/08/22 ರಂದು ರಾತ್ರಿ 8 ಗಂಟೆಯಿಂದ ದಿನಾಂಕ: 25/08/22 ರ ಮಧ್ಯದ  ಅವಧಿಯಲ್ಲಿ ಯಾರೋ ಅಪರಿಚಿತ ಕಳ್ಳರು ಕಳವು ಮಾಡಿಕೊಂಡು ಹೊಗಿರುತ್ತಾರೆ. ಮೀನಕೇರಾ ಸಿವಾರದಲ್ಲಿ ಕಳುವಾದ ಸ್ಥಳ ಇರುತ್ತದೆ ಇದಕ್ಕೆ ಅಳವಡಿಸಿದ ಹಳೆ ಬ್ಯಾಟ್ರಿಗಳ ಅಂದಾಜು ಕಿಮ್ಮತ್ತು 24 ಸಾವಿರ ರೂ. ಗಳಾಗಬಹುದು. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

ಬಸವಕಲ್ಯಾಣ ನಗರ ಪೊಲೀಸ್ ಠಾಣೆ  ಅಪರಾಧ ಸಖ್ಯೆ  122/2022 ಕಲಂ 78(3) ಕೆಪಿ ಕಾಯ್ದೆ :-

ದಿನಾಂಕ: 25/08/2022 ರಂದು 11:30 ಗಂಟೆಗೆ ಪಿಎಸ್ಐ ರವರು  ಠಾಣೆಯಲ್ಲಿದ್ದಾಗ ಬಸವಕಲ್ಯಾಣ ನಗರದ ಶಾಂತಿನೀಕೇತನ ಶಾಲೆಯ ಮೈದಾನದಲ್ಲಿನ ಸುಲ್ತಾನ ಹೋಟೆಲ್ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರಿಗೆ ಕರೆದು ಅವರಿಗೆ ಒಂದು ರೂಪಾಯಿ ನೀಡಿರಿ, ಮಟ್ಕಾ ನಂಬರ ಹತ್ತಿದರೆ ಒಂದು ರೂಪಾಯಿಗೆ 90 ರೂಪಾಯಿ ಕೊಡುತ್ತೆನೆ. ಅಂತ ಹೇಳಿ ಒಬ್ಬ ವ್ಯಕ್ತಿ ಸಾರ್ವಜನಿಕರಿಂದ ಹಣ ಪಡೆದು ಅವರಿಗೆ ಮಟ್ಕಾ ಚೀಟಿ ಬರೆದು ಕೊಡುತ್ತಿದ್ದಾನೆ ಅಂತ ಖಚೀತ ಬಾತ್ಮಿ ಬಂದಿದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ದಾಳಿ ಮಾಡಿ ಆಗ ಸಮಯ 12:00 ಗಂಟೆಯಾಗಿತ್ತು. ದಾಳಿ ಮಾಡಿ ಹಿಡಿದ ವ್ಯಕ್ತಿ ಆತನ ಹೆಸರು ವಿಳಾಸ ವಿಚಾರಿಸಲು ಆತನು ತನ್ನ ಹೆಸರು ಜಲೀಲಮಿಯ್ಯಾ ತಂದೆ ಫಕೀರಸಾಬ ಕಬಾಡಿ, ವಯಸ್ಸು 41 ವರ್ಷ, ಜಾತಿ: ಮುಸ್ಲಿಂ, ಉ:ಲಾರಿ ಬಾಡಿ ಬಿಲ್ಡರ್, ಸಾ: ಶಾಹಾಪುರ ಗಲ್ಲಿ ಬಸವಕಲ್ಯಾಣ ಅಂತ ಹೇಳಿದನು, ಆತನ ಅಂಗ ಝಡ್ತಿ ಮಾಡಲು ಆತನ ಹತ್ತಿರ 48,500/-ರೂಪಾಯಿ ನಗದು ಹಣ ಮತ್ತು ಒಂದು ಬಾಲ ಪೇನ್ನ ಹಾಗೂ ಒಂದು ಮಟ್ಕಾ ನಂಬರ ಬರೆದಿರುವ ಚೀಟಿ ದೋರಕಿರುತ್ತದೆ. ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.